ರುದ್ರಪ್ಪನ ಹೆಸರು ಹೇಗೆಯೇ ಇರಲಿ, ಆದರೆ ಅವನಂಥಾ ಸೌಮ್ಯ ಗುಣದ ಶಾಂತಸ್ವಭಾವದ ಮನುಷ್ಯ ಪ್ರಾಣಿಯನ್ನು ನಾನು ಕಂಡಿಲ್ಲ.

ಅವನ ಹೆಂಡತಿ ಹೂವಮ್ಮ ನೆರೆಮನೆಗೆ ಕೇಳುವಂತೆ ಜೋರಾಗಿ ಕಿರುಚುತ್ತಿದ್ದಾಳೆ (ಆಕೆಗೆ ಹೇಗೆ ಹೂವಮ್ಮ ಎಂಬ 'ಅನರ್ಥನಾಮ' ಲಭಿಸಿತೋ ತಿಳಿಯದು. ನಿಜಕ್ಕೂ ಆಕೆ ಮುಳ್ಳುಗಂಟಿ ಕಳ್ಳಿಗಿಡದಂತಹ 'ಕೋಮಲಾಂಗಿ' ನಿತಂಬಿನಿ) — 'ನೀವೆಂತಹ ನಪುಂಸಕರು? ಲಜ್ಜೆಯಾಗುವುದಿಲ್ಲವೇ? ನೆರೆಮನೆಯ ನಾಗಮ್ಮ ನಮ್ಮ ತೋಟದ ಗೋಡೆಯ ಮೇಲೆ ಲಾಗ ಹಾಕಿ ಬಂದು ಯಾರನ್ನೂ ಕೇಳದೆ ನಮ್ಮ ಗಿಡದಿಂದ ಎರಡು ನಿಂಬೆಹಣ್ಣು ಕಿತ್ತುಕೊಂಡು ಹೋಗಿದ್ದಾಳೆ. ನೀವು ನೋಡಿಯೂ ನೋಡದವರಂತೆ ನಟಿಸಿ ಒಳಗೆ ಹೋಗಿ ಅಡಗುವುದೇ? ಆ ಕಳ್ಳ ಹೆಂಗಸನ್ನು ಏಕೆ ತಡೆಯಲಿಲ್ಲ? ಅವಳ ಹೆಸರು ನಾಗಮ್ಮನಲ್ಲ ಗೋಡೆ ಲಾಗಮ್ಮ. ನೀವೇನು ಮನುಷ್ಯರೋ ಮರವೋ? ನಾಚಿಕೆ ಆಗುವುದಿಲ್ಲವೇ?'

ಮತ್ತೆ ಮಕ್ಕಳ ಕಡೆಗೆ ತಿರುಗಿ, 'ನಿಮ್ಮ ಅಪ್ಪ ಪುಕ್ಕ. ಅವರಿಗೆ ಹೆದರಿಕೆ. ನೆರೆಮನೆಯವರೊಡನೆ ಜಗಳವಾದೀತು ಎಂದು ಭಯ.'

ರುದ್ರಪ್ಪನನ್ನು ಹೇಡಿ, ಪುಕ್ಕ, ಭೀರು ಎಂದು ಹೇಳಿದರೆ ಯಾರಿಗೂ ವಿಶ್ವಾಸವಾಗದು. ಏಕೆಂದರೆ ಬಲಿಷ್ಠನಾದ ಆಳು. ಉತ್ಸಾಹದಿಂದ ಕೆಲಸ ಮಾಡಿ ತೋಳುಗಳು ಜಟ್ಟಿಯ ತೋಳಿನಂತೆ ಸಶಕ್ತ ಮಾಂಸಖಂಡಗಳಿಂದ ಬಿಗಿಯಾಗಿವೆ. ಅವನು ಒಂದು ಏಟು ಕೊಟ್ಟರೆ ಅವನ ಪ್ರತಿದ್ವಂದಿ ಯಾರೇ ಇರಲಿ ಧಾರಾಳತನವನ್ನು ಆಲಂಗಿಸಿ ಭೂಮಾತೆಗೆ ಶರಣು ಹೋಗುವುದೇ ಕ್ಷೇಮಕರ.

ಅವನ ಮಗ ಶಿವಪ್ಪನಿಗೂ ತಂದೆಯ ನಡತೆಯನ್ನು ಕಂಡು ತಿರಸ್ಕಾರ. 'ಬಯ್ಯಲಿಕ್ಕಾದರೂ ಬಾಯಿಯೂ ಇಲ್ಲವೇ? ನಮ್ಮ ಮನೆಯ ತೋಟವೇನು ರಾಜಾರಸ್ತೆಯೇ?' ಎಂದು ಅವನೂ ಗೊಣಗುಟ್ಟಿದ.

ರುದ್ರಪ್ಪ ಬಾಯಿ ತೆರೆಯಲಿಲ್ಲ. ಕುಂಬಳಕಾಯಿ ಬಳ್ಳಿಗಳಿಗೆ ನೀರು ಹಾಕುತ್ತಾ ಗೊಬ್ಬರ ಇರಿಸುತ್ತಾ ಎಲೆಗಳ ಮೇಲೆ, ಕ್ರಿಮಿ ನಿವಾರಣೆಗಾಗಿ ಬೂದಿ ಎರಚುತ್ತಾ ಈ ಸಸ್ಯಜೀವಿಗಳ ಸೇವೆ, ಶುಶ್ರೂಷೆ, ಉಪಚಾರಗಳಲ್ಲೇ ಮಗ್ನನಾಗಿದ್ದ.

ಕೊನೆಗೆ ಸಣ್ಣ ಮಗಳು ಜಾನಕಿ ತಂದೆಯೊಡನೆ ಪುನಃ ಪುನಃ ಪೀಡಿಸಿ ಕೇಳಿದಾಗ ಮೃದುವಾಗಿ ಉತ್ತರ ಕೊಟ್ಟ. 'ಏನೋ ಬಹಳ ಅಗತ್ಯ ಇದ್ದಿರಬೇಕು. ಏನೋ ಅಕಸ್ಮಾತ್ತಾಗಿ ನಂಟರು ಬಂದಿರಬೇಕೆಂದು ಕಾಣುತ್ತದೆ. ನಂಟರು ಬಂದರೆ ಒಂದು ನಿಂಬೆಯ ಹಣ್ಣಿನ ಸಕ್ಕರೆ ಪಾನಕವನ್ನಾದರೂ ಮಾಡಿ ಕೊಡಬೇಡವೇ? ಅಕಸ್ಮಾತ್ತಾಗಿ ಬಂದವರಿಗೆ ಕಾಫಿ ಮಾಡಲು ಹಾಲು ಎಲ್ಲಿದೆ? ಹಾಗೆ ಬಂದ ಬಂದವರಿಗೆಲ್ಲಾ ಕಾಫಿ ಕುಡಿಸಿದರೆ ಸಣ್ಣ ಮಕ್ಕಳಿಗೆ ಹಾಲು ಎಲ್ಲಿ ಉಳಿದೀತು? ಸುಮ್ಮನೆ ಎರಡು ನಿಂಬೆ ಹಣ್ಣಿನಲ್ಲಿ ಏನು ಮಹಾ ಸರ್ವನಾಶವಾಗುತ್ತದೆ? ಅದೇನು ಕುಂಬಳವೊ ಆನೆಯೋ?'

ಅದೇ ದಿನ ಸಂಜೆ ಅದೇ ನೆರೆಮನೆ ನಾಗಮ್ಮ ಮನೆಗೆ ಬಂದು ಜಾನಕಿಗೆ ನಾಲ್ಕು ಕಿತ್ತಳೆ ಹಣ್ಣು ಕೊಟ್ಟು ಹೋದಳು. 'ಈವತ್ತು ನಮ್ಮ ಮನೆಗೆ ಮಂಗಳೂರಿಂದ ಅಕಸ್ಮಾತ್ತಾಗಿ ದೂರದ ನಂಟರು ಬಂದು ಹೋದರು. ಒಂದು ಡಜನ್ ಕಿತ್ತಳೆ ಹಣ್ಣು ತಂದಿದ್ದರು. ಒಳ್ಳೆಯ ಸಿಹಿಯಾಗಿದೆ. ತೆಗೆದುಕೋ. ನಿನ್ನ ಅಮ್ಮನಿಗೆ ಕೊಡು. ಶಿವಪ್ಪನಿಗೂ ಕೊಡು. ಮನೆಯಲ್ಲಿ ತುಂಬಾ ಕೆಲಸವಿದೆ. ಮಗು ಅಳುತ್ತಿದ್ದಾನೆ. ನಿನ್ನ ಅಮ್ಮನ ಹತ್ತಿರ ಮಾತನಾಡಲು ಈಗ ಹೊತ್ತಿಲ್ಲ' ಎಂದು ಹೇಳಿ ಹೋದಳು.